ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 17–12–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಜನಾಂಗೀಯ, ಧಾರ್ಮಿಕ ಅಲ್ಪಸಂಖ್ಯಾತರ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕು ದಿನಾಚರಣೆ: | 18–12–2015<br>ಶುಕ್ರವಾರ<br>ಮಧ್ಯಾಹ್ನ<br>2–30 ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧ,<br>ಬೆಂಗಳೂರು |
| 2. | 29 ನೇ ಅಖಿಲ ಭಾರತ ಅಂಚೆ ಪುಟ್‌ಬಾಲ್ ಪಂದ್ಯಾವಳಿ :<br><br>ಮುಖ್ಯ ಅತಿಥಿ:<br><br>ಎಸ್.ಸಿ. ದತ್ತ,<br>ನಿವೃತ್ತ ಕಾರ್ಯದರ್ಶಿಗಳು,<br>ಕೇಂದ್ರ ಸರ್ಕಾರದ ಅಂಚೆ ಇಲಾಖೆ<br><br>ಅಧ್ಯಕ್ಷತೆ:<br><br>ಶ್ರೀಮತಿ ಉಷಾ ಚಂದ್ರಶೇಖರ್,<br>ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ,<br>ಕರ್ನಾಟಕ ವೃತ್ತ,<br>ಬೆಂಗಳೂರು | 18–12–2015<br>ಶುಕ್ರವಾರ<br>ಸಂಜೆ<br>4–00 ಗಂಟೆಗೆ | ಬೆಂಗಳೂರು ಪುಟ್‌ಬಾಲ್ ಸ್ಟೇಡಿಯಂ,<br>ಅಶೋಕ ನಗರ, ಗರುಡಮಾಲ್ ಹತ್ತಿರ,<br>ಬೆಂಗಳೂರು – 560 025. |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಮನೆಯಂಗಳದಲ್ಲಿ ಮಾತುಕತೆ :
## ತಿಂಗಳ ಅತಿಥಿಯಾಗಿ ಚಿತ್ರ ಕಲಾವಿದ ಬಿ. ಕೆ. ಎಸ್. ವರ್ಮಾ

ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿಸೆಂಬರ್ 19 ರ ಶನಿವಾರ ಸಂಜೆ 4–00 ಗಂಟೆಗೆ ಜೆ. ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ "ಮನೆಯಂಗಳದಲ್ಲಿ ಮಾತುಕತೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ ತಿಂಗಳ ಅತಿಥಿಯಾಗಿ ಖ್ಯಾತ ಚಿತ್ರಕಲಾವಿದ ಬಿ.ಕೆ.ಎಸ್. ವರ್ಮಾ ಅವರು ಪಾಲ್ಗೊಳ್ಳಲಿದ್ದಾರೆ. ಅಂದು ಮಧ್ಯಾಹ್ನ 3–00 ಗಂಟೆಯಿಂದ ವಿದ್ವಾನ್ ಹೆಚ್.ಎಸ್. ವೇಣುಗೋಪಾಲ್ ಅವರಿಂದ ಕೊಳಲುವಾದನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

## ಗಣರಾಜ್ಯೋತ್ಸವ ಸ್ಪರ್ಧೆಗಳು

ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ)

ಮೈಸೂರು ತೋಟಗಾರಿಕೆ ಸಂಘವು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಗಣರಾಜ್ಯೋತ್ಸವ ತೋಟಗಾರಿಕೆ ಫಲಪುಷ್ಪ ಪ್ರದರ್ಶನವನ್ನು ಏರ್ಪಡಿಸಲಿದೆ. ಇದರ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಲಿದ್ದು ಡಿಸೆಂಬರ್ 28 ರಂದು ತರಕಾರಿ ಗಾರ್ಡನ್ ಪ್ರದರ್ಶನ ಸ್ಪರ್ಧೆ, ಜನವರಿ 14 ರಂದು ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಪುಷ್ಪ ಪ್ರದರ್ಶನ ಸ್ಪರ್ಧೆ ಹಾಗೂ ಇಕೆಬಾನ, ಇಂಡಿಯನ್ ಪ್ಲೋರಲ್ ಆರ್ಟ್ ಮತ್ತು ಬೋನ್ಸಾಯ್, ಥಾಯ್ ಆರ್ಟ್ ಹಾಗೂ ಡಚ್ ಹೂಗಳ ಅಲಂಕಾರಿಕ ಹಾಗೂ ಒಣ ಹೂಗಳ ಪ್ರದರ್ಶನವನ್ನು ಹಮ್ಮಿಕೊಂಡಿದೆ.

ಪಲ್ಲವಿ:ಬಾಬು:ಜಿಪಿಆರ್.

## "ಹ್ಯೂಮನ್ ಪ್ಲಾನೆಟ್ಸ್ : ಡೆಸರ್ಟ್ಸ್

ಬೆಂಗಳೂರು, ಡಿಸೆಂಬರ್ 17 (ಕರ್ನಾಟಕ ವಾರ್ತೆ)

ಬೆಂಗಳೂರಿನ ಜವಾಹರಲಾಲ್ ನೆಹರೂ ತಾರಾಲಯದಲ್ಲಿ 10 ವರ್ಷ ವಯಸ್ಸಿನ ಮೇಲ್ಪಟ್ಟವರಿಗಾಗಿ ಡಿಸೆಂಬರ್ 20 ರ ಭಾನುವಾರ ಸಂಜೆ 6–00 ಗಂಟೆಗೆ 55 ನಿಮಿಷಗಳ "ಹ್ಯೂಮನ್ ಪ್ಲಾನೆಟ್ಸ್ : ಡೆಸರ್ಟ್ಸ್" ಎಂಬ ವಿಜ್ಞಾನ ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ದೂರವಾಣಿ 080 – 2220 3234 ಅಥವಾ 2226 6084 ಅಥವಾ ಅಂತರ್ಜಾಲ http://www.taralaya.org/monthly-movie=php ಅನ್ನು ಸಂಪರ್ಕಿಸಲು ಕೋರಿದೆ.

ಪಲ್ಲವಿ:ಬಾಬು:ಜಿಪಿಆರ್.

# Ethnic, Religious and Linguistic Minorities Rights Day Celebration

Bengaluru, Dec. 17-

Karnataka State Minorities Commission has organized "Ethnic, Religious and Linguistic Minorities Rights Day Celebration" on 18th December, 2015 at Banquet Hall Vidhanasoudha at 2.30 pm.

Chief Minister Siddaramaiah will inaugurate the program. Minister for Minorities Welfare, Wakf, Municipal Administration Dr. Qamarul Islam will deliver keynote address. Minister for Infrastructure Development, Information and Haj R. Roshan Baig will preside over the function. Minister for Law and Higher Education T.B. Jayachandra, Minister for Bengaluru Development K.J. George, Minister for Transport Sri Ramalinga Reddy, Home Minister Dr. G. Parameshwar, Karnataka State Minorities Commission Chairperson Balkhees Banu will grace the occasion, according to an official Press release.

**SVL**

## ಜನಾಂಗೀಯ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕು ದಿನಾಚರಣೆ

**ಬೆಂಗಳೂರು, ಡಿ. 17**

**ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು ಡಿಸೆಂಬರ್ 18 ರಂದು ಮಧ್ಯಾಹ್ನ 2.30 ಗಂಟೆಗೆ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ 'ಜನಾಂಗೀಯ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕು ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.**

**ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್, ಸಾರ್ವಜನಿಕ ಉದ್ದಿಮೆ ಹಾಗೂ ಪೌರಾಡಳಿತ ಸಚಿವ ಡಾ. ಖಮರುಲ್ ಇಸ್ಲಾಂ ಅವರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅಧ್ಯಕ್ಷತೆ ವಹಿಸುವರು. ಕಾನೂನು ಮತ್ತು ಉನ್ನತ ಶಿಕ್ಷಣ ಸಚಿವರ ಶ್ರೀ ಟಿ.ಬಿ. ಜಯಚಂದ್ರ, ಬೆಂಗಳೂರು ಅಭಿವೃದ್ಧಿ ಸಚಿವ ಶ್ರೀ ಕೆ.ಜೆ. ಜಾರ್ಜ್, ಸಾರಿಗೆ ಸಚಿವ ಶ್ರೀ ರಾಮಲಿಂಗಾರೆಡ್ಡಿ, ಗೃಹ ಸಚಿವ ಡಾ. ಜಿ. ಪರಮೇಶ್ವರ, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷೆ ಶ್ರೀಮತಿ ಬಲ್ಕೀಸ್ ಬಾನು ಮೊದಲಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.**

**ಎಸ್‌ವಿಎಲ್**